ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.3541/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಚಂದ್ರಶೇಖರ್** | | |
| **ತಂದೆ:ಹೆಸರು** | **ಗೋವಿಂದಪ್ಪ** | **ಪಿಡಬ್ಲೂ:** | **08** |
| **ವಯಸ್ಸು** | **48 ವರ್ಷ** | **ಸಿಡಬ್ಲೂ:** | **20** |
| **ಉದ್ಯೋಗ:** | **ಡಿ ವೈ ಎಸ್ ಪಿ** | | |
| **ವಾಸ ಸ್ಥಳ:** | **ಸಿಂಧನೂರು.** | | |

**ದಿನಾಂಕ 29/01/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ಈ ದಿನ ನ್ಯಾಯಾಲಯದಲ್ಲಿ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ನಾನು ದಿ.01-10-2020 ರಿಂದ ದಿ.23-03-2021 ರವರೆಗೆ ಸಿಪಿಐ, ಸಿಂಧನೂರು ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ:28.02.2021 ರಂದು ಸದರಿ ಪ್ರಕರಣದ ತನಿಖೆಯನ್ನು ಚಾಸಾ-19 ರವರಿಂದ ಪಡೆದು ಪರಿಶೀಲಿಸಿರುತ್ತೇನೆ. ಅದೇ ದಿನ ಘಟನ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-9 & 10 ರವರ ಸಮಕ್ಷಮ ಮ.12 ರಿಂದ 1 ಗಂಟಯವರೆಗೆ ಪಂಚನಾಮೆ ಮಾಡಿ, 2 ಫೋಟೋಗಳನ್ನು ತೆಗೆದಿರುತ್ತೇನೆ & ಕಚ್ಚಾ ನಕಾಶೆ ತಯಾರಿಸಿರುತ್ತೇನೆ. ಸಾಕ್ಷಿಯು ನಿಪಿ-2 ರಲ್ಲಿನ

ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2 ಡಿ ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನಿಪಿ-23 ಎಂದು, ಸಾಕ್ಷಿಯ ಸಹಿಯನ್ನು ನಿಪಿ-23 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು.

ಅದೇ ದಿನ ಸಂಚಾರಿ ಠಾಣೆಗೆ ಭೇಟಿ ನೀಡಿ ಅಪಘಾತಕ್ಕೆ ಒಳಪಟ್ಟ ಲಾರಿ ನಂ.ಕೆಎ 16/ಸಿ-2826 & ಐಶರ್ ಲಾರಿ ಸಂ.ಕೆ ಎ 04/ಡಿ-2971 ನ್ನು ಪಂಚರ ಸಮಕ್ಷಮ ಮ. 1-30 ರಿಂದ 2-30 ರವರೆಗೆ ನಿಪಿ-12 ರಂತೆ ಪಂಚನಾಮೆ ಮಾಡಿ ಜಪ್ತಿ ಮಾಡಿಕೊಂಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-12 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-13 ರಿಂದ 20 ನ್ನು ನೋಡಿ ಗುರುತಿಸಿರುತ್ತಾರೆ.

ಅದೇ ದಿನ ಚಾಸಾ-19 ರವರು ಶವ ಪಂಚನಾಮೆ & ಅದರೊಂದಿಗೆ ದಾಖಲೆಗಳನ್ನು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿ, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಶವ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-24 ಎಂದು ಗುರುತಿಸಲಾಯಿತು. ಚಾಸಾ-19 ರವರು ಮರಣಹೊಂದಿರುತ್ತಾರೆ, ಅವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಚಾಸಾ-19 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-24 ಎ ಎಂದು, 2 ಫೋಟೋಗಳನ್ನು ನಿಪಿ-25 & 26 ಎಂದು ಗುರುತಿಸಲಾಯಿತು. ಸಿಡಿಯನ್ನು ನಿಪಿ-27 ಎಂದು, ಕಲಂ. 65 ಬಿ ಪ್ರ. ಪತ್ರವನ್ನು ನಿಪಿ-28 ಎಂದು, ಸಾಕ್ಷಿಯ ಸಹಿಯನ್ನು ನಿಪಿ-28 ಎ ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-4, 5, 7, 16 ರಿಂದ 18 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿ.04-03-2021 ರಂದು ಆರೋಪಿಯನ್ನು ಹಾಜರುಪಡಿಸಿಕೊಂಡು, ದಸ್ತಗಿರಿ ನಿಯಮ ಪಾಲಿಸಿ, ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಚಾಸಾ-1 ರಿಂದ 8 ರವರ ಮರು ಹೇಳಿಕೆ ಪಡೆದಿರುತ್ತೇನೆ.

ಅದೇ ದಿನ ಐಶರ್ ಲಾರಿ ಸಂ.ಕೆ ಎ 04/ಡಿ-2971 ಕ್ಕೆ ಸಂಬಂಧಿಸಿದ ಇಂಡಿಮಿನಿಟಿ ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ. ಇಂಡಿಮಿನಿಟಿ ಬಾಂಡನ್ನು ನಿಪಿ-29 ಎಂದು, ಸಾಕ್ಷಿಯ ಸಹಿಯನ್ನು ನಿಪಿ-29 ಎ ಎಂದು ಗುರುತಿಸಲಾಯಿತು.

ದಿ.06-03-2021 ರಂದು ಐಎಂವಿ ವರದಿ ಪಡೆದಿರುತ್ತೇನೆ. ಸದರಿ ವರದಿಯನ್ನು ನಿಪಿ-30 ಎಂದು, ಸಾಕ್ಷಿಯ ಸಹಿಯನ್ನು ನಿಪಿ-30 ಎ ಎಂದು ಗುರುತಿಸಲಾಯಿತು.

ದಿ.08-03-2021 ರಂದು ಗಾಯದ ಪ್ರ.ಪತ್ರಗಳನ್ನು ಪಡೆದಿರುತ್ತೇನೆ. ಸದರಿ ಪ್ರ.ಪತ್ರವನ್ನು ನಿಪಿ-31 & 32 ಎಂದು, ಸಾಕ್ಷಿಯ ಸಹಿಯನ್ನು ನಿಪಿ-31 ಎ & 32 ಎ ಎಂದು ಗುರುತಿಸಲಾಯಿತು. ಅದೇ ದಿನ ಅದೇ ದಿನ ಲಾರಿ ನಂ.ಕೆಎ 16/ಸಿ-2826 ಕ್ಕೆ ಸಂಬಂಧಿಸಿದ ಇಂಡಿಮಿನಿಟಿ ಬಾಂಡ್

ಪಡೆದು ಬಿಡುಗಡೆ ಮಾಡಿರುತ್ತೇನೆ. ಇಂಡಿಮಿನಿಟಿ ಬಾಂಡನ್ನು ನಿಪಿ-33 ಎಂದು, ಸಾಕ್ಷಿಯ ಸಹಿಯನ್ನು ನಿಪಿ-33 ಎ ಎಂದು ಗುರುತಿಸಲಾಯಿತು. ಮುಚ್ಚಳಿಕೆ ಪ್ರ.ಪತ್ರವನ್ನು ನಿಪಿ-34 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-34 ಎ ಎಂದು ಗುರುತಿಸಲಾಯಿತು. ಅದೇ ದಿನ ಪಿ ಎಂ ವರದಿಯನ್ನು ಪಡೆದಿರುತ್ತೇನೆ. ನಿಪಿ-35 ಎಂದು, ಸಾಕ್ಷಿಯ ಸಹಿಯನ್ನು ನಿಪಿ-35 ಎ ಎಂದು ಗುರುತಿಸಲಾಯಿತು.

ಅದೇ ದಿನ ಮೃತನ ಪಿ ಎಂ ಕಾಲಕ್ಕೆ ಸಂಗ್ರಹಿಸಿದ್ದ ಮಾಲನ್ನು ರಾಸಾಯನಿಕ ಪರೀಕ್ಷೆಗೆ ಕಳಿಸಿಕೊಟ್ಟೆನು.

ದಿ.21-03-2021 ರಂದು ತನಿಖೆ ಮುಕ್ತಾಯಗೊಂಡಿದ್ದು, ಎಫ್ ಎಸ್ ವರದಿಯನ್ನು ಕಾಯ್ದಿರಿಸಿ, ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ಎಫ್ ಎಸ್ ಎಲ್ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ. ಸಾಕ್ಷಿಯು ಎಫ್ ಎಸ್ ಎಲ್ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-36 ಎಂದು ಗುರುತಿಸಲಾಯಿತು.

ಸಾಕ್ಷಿಯು ಪ್ರ.ವ. ವರದಿ, ದೂರನ್ನು & ಅದರಲ್ಲಿರುವ ಚಾಸಾ-19 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರ. ವ. ವರದಿಯನ್ನು ನಿಪಿ-37 ಎಂದು, ಚಾಸಾ-19 ರವರ ಸಹಿಯನ್ನು ನಿಪಿ-37 ಎ ಎಂದು, ನಿಪಿ-1 ರಲ್ಲಿರುವ ಚಾಸಾ-19 ರವರ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಕಲಂ.133 ನೋಟೀಸನ್ನು, ಅದರ ಉತ್ತರವನ್ನು, ವಾಹನದ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-38 ರಿಂದ 40 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-38 ಎ ಯಿಂದ 39 ಎ ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ**

1. ಸಿಂಧನೂರಿನಿಂದ ಶ್ರೀಪುರಂ ಜಂಕ್ಷನ್‌ಗೆ ಹೋಗುವ ಕಾಲಕ್ಕೆ ಒಂದು ಬ್ರಿಡ್ಜ್ ಬರುತ್ತದೆ ಎಂದರೆ ಸಾಕ್ಷಿಯು ದೂರದಲ್ಲಿ ಬರುತ್ತದೆ ಎನ್ನುತ್ತಾರೆ. ಘಟನಾ ಸ್ಥಳದಲ್ಲಿ ಹಲವಾರಿ ಅಂಗಡಿಗಳು, ಪೆಟ್ರೋಲ್ ಬಂಕ್ ಇದೆ ಎಂದರೆ ಸಾಕ್ಷಿಯು ಅಂಗಡಿಗಳಿವೆ, ಆದರೆ ಪೆ.ಬಂಕ್ ದೂರ ಇದೆ ಎನ್ನುತ್ತಾರೆ. ಗಂಗಾವತಿಯಿಂದ-ಸಿಂಧನೂರಿಗೆ ಬರುವಾಗ ಘಟನಾ ಸ್ಥಳದಲ್ಲಿ ಹಂಪ್ಸ್ ಇದೆ ಎಂದರೆ ಸಾಕ್ಷಿಯು 5 ವರ್ಷಗಳ ಹಿಂದೆ ಇತ್ತೋ ಇಲ್ಲವೋ ಸರಿಯಾಗಿ ನೆನಪಿಲ್ಲ ಎನ್ನುತ್ತಾರೆ.

2. ಘಟನಾ ಸ್ಥಳದಿಂದ ಸಿಂಧನೂರಿಗೆ ಪೂರ್ವಕ್ಕೆ ಬರುವಾಗ ಬಳ್ಳಾರಿ-ಸಿರುಗುಪ್ಪ ರಸ್ತೆ ಇದೆ ಎಂದರೆ ಸಾಕ್ಷಿಯು 100 ಮೀ. ದೂರದಲ್ಲಿ ರಸ್ತೆ ಇದೆ ಎನ್ನುತ್ತಾರೆ. ಪಶ್ಚಿಮಕ್ಕೆ ಬಾರ್, ಬೇಕರಿಗಳು ಇವೆ ಎಂದರೆ ಸರಿ. ಅಲ್ಲಿ ಅಂಗಡಿಗಳು ಇರುವುದರಿಂದ ಜನ ಸಂದಣಿ ಇರುತ್ತದೆ

ಎಂದರೆ ಸರಿ. ಅಲ್ಲಿ ತಿರುವು ಇರುವುದರಿಂದ ಎಲ್ಲಾ ವಾಹನಗಳು ನಿಧಾನವಾಗಿ ಬರುತ್ತವೆ ಎಂದರೆ ಸರಿಯಲ್ಲ.

3. ನಾನು ಚಾಸಾ-19 ರವರ ಮುಖಾಂತರ ಪಂಚರಿಗೆ ನೋಟೀಸು ಕೊಟ್ಟಿದ್ದೆ.

4. ನೀವು ಯಾವುದೇ ಸ್ಥಳಕ್ಕೆ ಹೋಗಿಲ್ಲ ಪಂಚನಾಮೆ ಮಾಡಿಲ್ಲ, ಪಂಚರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ದಾಖಲೆಗಳನ್ನು, ವರದಿಗಳನ್ನು ಪಡೆದಿಲ್ಲ, ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಇಂಡಿಮಿನಿಟಿ ಬಾಂಡ್ ಪಡೆದು ವಾಹನಗಳನ್ನು ಬಿಡುಗಡೆ ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ತನಿಖೆ ಮಾಡಿ, ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**